# <u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಬೇಲೂರು.</u>

**ಸಿ. ಸಿ. ನಂ.:289/2018**

| | | |
|---|---|---|
| ಹೆಸರು | ಸ್ವಾಮಿ ಡಿ ಕೆ | **ದಿಃ 05-04-2024** |
| ತಂದೆ ಹೆಸರು | ಕಾಳಪ್ಪ | |
| ವಯಸ್ಸು | 43 ವರ್ಷ | **ಪಿಡಬ್ಲ್ಯೂ: 3** |
| ಉದ್ಯೋಗ | ವ್ಯವಸಾಯ | **ಸಿಡಬ್ಲ್ಯೂ: 4** |
| ವಾಸ | ಶಿವನೇನಹಳ್ಳಿ | **ವಿಧಿ ಬದ್ಧವಾಗಿ ಪ್ರಮಾಣೀಕರಿಸಲಾಯ್ತು** |

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ನನಗೆ ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯ ಪರಿಚಯ ಇರುತ್ತದೆ. ಚಾಸಾ-5 ರವರ ಪರಿಚಯ ಇರುತ್ತದೆ.

ಈಗ ತೋರಿಸಿರುವ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆ ಕೃತ್ಯ ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-2(ಸಿ) ಎಂದು ನಿಶಾನೆಗೊಳಪಡಿಸಲಾಯಿತು.

ನಿಪಿ-2 ರಲ್ಲಿರುವ ಸಹಿಯನ್ನು ನಾನು ಹಳೇಬೀಡು ಠಾಣೆಯಲ್ಲಿ ಸುಮಾರು 6 ವರ್ಷಗಳ ಹಿಂದೆ ಮಾಡಿರುತ್ತೇನೆ.

ನಿಪಿ-2 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ.

ನನ್ನ ಸಮಕ್ಷಮ ಪೋಲೀಸರು ಯಾವುದೇ ಮಹಜರ್ ಮಾಡಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

ಈಗ ನ್ಯಾಯಾಲಯದ ಮುಂದಿರುವ ಮುಮಾ-1 ರಿಂದ 3 ನ್ನು ನೋಡಿ ಗುರ್ತಿಸಿರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ**04-04-2018** ನಾನು ಮತ್ತು ಚಾಸಾ-**5** ರವರು ನಮ್ಮ ಗ್ರಾಮದ ದೇವಸ್ಥಾನದ ಹತ್ತಿರ ಮಾತನಾಡುತ್ತ ನಿಂತಿದ್ದಾಗ ಚಾಸಾ-**1** ರವರು ಸಂಜೆಃ **4.30** ಗಂಟೆ ಸಮಯಕ್ಕೆ ಸಿಬ್ಬಂದಿಯೊಂದಿಗೆ ಬಂದಿದ್ದು ನನ್ನನ್ನು ಮತ್ತು ಚಾಸಾ-**5** ಮತ್ತು **6** ರವರನ್ನು ಕರೆದು ಬಂದ ಮಾಹಿತಿಯನ್ನು ತಿಳಿಸಿ ದಾಳಿ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿದ್ದು ಅದಕ್ಕೆ ನಾವು ಒಪ್ಪಿ ಆರೋಪಿಯ ಮನೆಯ ಹತ್ತಿರ ಹೋದೆವು ಎಂದರೆ ಸರಿಯಲ್ಲ. ಮನೆಯ ಹತ್ತಿರ ಹೋದಾಗ ಆರೋಪಿ ವಾಸದ ಮನೆಯ ಜಗುಲಿಯ ಮೇಲೆ ಮದ್ಯ ಮಾರಾಟ ಮಾಡುತ್ತಿದ್ದು ಸ್ಥಳವನ್ನು ಪರಿಶೀಲಿಸಲಾಗಿ **180** ಎಂ ಎಲ್ ನ ಓಲ್ಡ್ ಟವರಿನ್ ವಿಸ್ಕಿಯ **5** ಸ್ಯಾಚೆಟ್ ಗಳು **90** ಎಲ್ ನ ರಾಜ ವಿಸ್ಕಿಯ **10** ಸ್ಯಾಚೆಟ್ ಗಳು, **90** ಎಂ ಎಲ್ ನ ಅಮೃತ್ ಸಿಲ್ವರ್ ಕಪ್ ಬ್ರಾಂಡಿಯ **10** ಸ್ಯಾಚೆಟ್ ಗಳು ಇರುವುದು ಕಂಡು ಬಂತು ಎಂದರೆ ಸರಿಯಲ್ಲ. ದೊರೆತ ಎಲ್ಲಾ ಸ್ವತ್ತುಗಳ ಪೈಕಿ ಒಂದೊಂದನ್ನು ಮಾದರಿಗಾಗಿ ತೆಗೆದು ರಾಸಾಯಿನಿಕ ಪರೀಕ್ಷೆಗಾಗಿ ಅವುಗಳನ್ನು ಬಿಳಿ ಚೀಲದಲ್ಲಿ ಸುತ್ತಿ ಮತ್ತು ದಾರದಲ್ಲಿ ಸುತ್ತಿ ಅವುಗಳಿಗೆ ಓ ಅಕ್ಷರದ ಇಲಾಖಾ ಸೀಲು ಕ್ರಮ ಜರುಗಿಸಲಾಯಿತು ಎಂದರೆ ಸರಿಯಲ್ಲ. ನಂತರ ದೊರೆತ ಸ್ವತ್ತುಗಳನ್ನು ಮತ್ತು ಆರೋಪಿಯನ್ನು ವಶಕ್ಕೆ ಪಡೆದು ನನ್ನ ಹಾಗೂ ಚಾಸಾ-**5** ಮತ್ತು **6** ರವರ ಸಮಕ್ಷಮ ಸಂಜೆಃ**5.00** ರಿಂದ **5.45** ಗಂಟೆಯವರೆಗೆ ನಿಪಿ-**2** ರಂತೆ ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ನಿಪಿ-**2** ಕ್ಕೆ ನಾನು ಸ್ಥಳದಲ್ಲಿ ಇದ್ದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನಿಪಿ-**2** ರಲ್ಲಿನ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆಯನ್ನು ನಿರಾಕರಿಸಿದ ಕಾರಣ ಅದನ್ನು ನಿಪಿ-**3** ಎಂದು ಗುರುತಿಸಲಾಯಿತು. ನಾನು ನಿಪಿ-**2** ರಂತೆ ಮಹಜರ್ ಕಾಲದಲ್ಲಿ ಹಾಜರಿದ್ದು ನಿಪಿ-**3** ರಂತೆ ಹೇಳಿಕೆ ನೀಡಿದ್ದರು ಸಹ ಆರೋಪಿ ನಮ್ಮ ಊರಿನವರೆ ಆದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಎಲ್ ಎನ್ ರವರಿಂದಃ</u>**

ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ನುಡಿಯತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ. ಇದೆ

(ಪ್ರಸನ್ನಕುಮಾರ್ ಸಿ.)
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಬೇಲೂರು.

Case called again.

Accused No.1 present.

CW-1 and 2 are present. They are examined as PW-1 and 2 respectively. Ex.P-1 to P-3, P-1(a), P-2(a) are marked.

The said material witnesses found to be turned hostile.

The Learned APP seeks to issue Summons to other witnesses. Since the material witnesses turned hostile, no purpose will be served if the summons is issued to other witnesses.

Hence, prayer of Learned APP is rejected.

The statement of accused U.s 313 of CrPC is also hereby dispensed.

A memo is filed by the Counsel for the accused No.1 to 6 stating that the earlier surety bond executed by them may be considered as bond executed towards compliance of provisions of sec. 437-A of CrPC.

Heard arguments.

For Judgment by: 27-12-2021

**Civil Judge and JMFC, Belur.**